ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 2, May-June 2026, Pp. 1-5
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕಮಲಾಪೂರ ಪರಿಸರದ ಸಾಹಿತ್ಯ

**ಡಾ. ಗೀತಾಂಜಲಿ**
ಅತಿಥಿ ಉಪನ್ಯಾಸಕರು, ಕನ್ನಡ ಅಧ್ಯಯನ ಹಾಗೂ ಸಂಶೋಧನಾ ವಿಭಾಗ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.

***Abstract:***
*ಫಲವತ್ತಾದ ನೆಲ, ಪರಿಶುದ್ಧ ಜಲ, ಪ್ರಜ್ಞಾವಂತ ಜನಮಾನಸಕ್ಕೆ ಹೆಸರಾಗಿರುವ ಕಮಲಾಪೂರ ಪರಿಸರ ತುಂಬಾ ಕುತೂಹಲಕಾರಿ ಅಂಶಗಳಿಂದ ಕೂಡಿದೆ. ಇಲ್ಲಿ ಐತಿಹಾಸಿಕ ದೇವಾಲಯ, ಪುರಾತನ ಕಟ್ಟಡಗಳು, ಸ್ವಾತಂತ್ರ್ಯ ಹೋರಾಟಗಾರರು, ರಾಜಕಾರಣಿಗಳು ಹಾಗೂ ಅಪಾರ ಶಿಕ್ಷಕ ಬಳಗವನ್ನು ಹೊಂದಿದೆ. ಇಲ್ಲಿನ ಪ್ರಸಿದ್ಧ ಬೆಳೆ ಅನೇಕ ಪೋಷಕಾಂಶಗಳಿಂದ ಕೂಡಿದ ಕೆಂಪು ಬಾಳೆ ಹಣ್ಣು. ಒಂದು ಜನಾಂಗದ ಸಂಸ್ಕೃತಿಯ ಸಾಧನೆ ಸ್ಪಷ್ಟವಾಗಿ ಗೋಚರವಾಗುವುದು ಅದರ ಪ್ರಾದೇಶಿಕ ಸಾಹಿತ್ಯದಲ್ಲಿ, ಕನ್ನಡ ಸಾಹಿತ್ಯ ಇತಿಹಾಸದಲ್ಲಿ ಹಲವಾರು ಘಟ್ಟಗಳಲ್ಲಿ ಅಸಂಖ್ಯಾತ ಸಾಹಿತಿಗಳು ಆಗಿರುವುದು ಕಾಣುತ್ತವೆ. ಅದರಂತೆ ಪ್ರತಿ ಜಿಲ್ಲೆ ಪ್ರತಿ ತಾಲೂಕಿನಲ್ಲಿಯೂ ಕೂಡ ಸಾಹಿತಿಗಳಿರುವಂತೆ ಕಮಲಾಪೂರ ಪರಿಸರವು ಕೂಡ ಸಾಹಿತಿಗಳ ನಾಡಾಗಿದೆ. ಹಲವು ಪ್ರಮುಖ ಸಾಹಿತಿಗಳೂ ತಮ್ಮದೆ ಆದ ಸಾಹಿತ್ಯ ಸೇವೆಯನ್ನು ಕನ್ನಡ ಸಾರಸ್ವತ ಲೋಕಕ್ಕೆ ಸಲ್ಲಿಸಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಪ್ರಸ್ತುತ ಲೇಖನದಲ್ಲಿ ಕಮಲಾಪೂರ ಪರಿಸರದ ಸಾಹಿತ್ಯವನ್ನು ಕುರಿತು ಚರ್ಚಿಸಲಾಗಿದೆ.*

***Keywords:*** *ಕನ್ನಡ ಸಾಹಿತ್ಯ, ಜಾನಪದ, ಕಮಲಾಪೂರ ಪರಿಸರ, ಇತಿಹಾಸ, ತತ್ವಪದಗಳು, ಮಲ್ಲಿಕಾರ್ಜುನ ತ್ರಿಮುಖೆ.*

## ಪೀಠಿಕೆ

ಕಮಲಾಪೂರ ಪರಿಸರದಲ್ಲಿ ಪ್ರಮುಖವಾಗಿ ಶ್ರೀ ಮಲ್ಲಿಕಾರ್ಜುನ ತ್ರಿಮುಖೆ, ಉಪಾಕ್ಷಯ್ಯ ಪುರಾಣಿಕರು, ಶಿರಗಾಪುರ ಬಂಡೆಪ್ಪ, ಸುಭಾಶ್ಚಂದ್ರ ಕಶೆಟ್ಟಿ, ನಾಗಣ್ಣ ವಿ. ವಿಶ್ವಕರ್ಮ, ಡಾ. ಕಲ್ಯಾಣರಾವ ಜಿ. ಪಾಟೀಲ, ಡಾ. ಸುರೇಂದ್ರಕುಮಾರ ಕೆರಮಗಿ, ಮಲ್ಲಮ್ಮ ಎಸ್. ಕಾಳಗಿ, ಡಾ. ಶರಣಬಸಪ್ಪ ವಡ್ಡನಕೇರಿ, ಸೇರಿದಂತೆ ಹಲವಾರು ಯುವ ಸಾಹಿತಿಗಳು ಕಂಡುಬರುತ್ತಾರೆ.

## ಶ್ರೀ ಮಲ್ಲಿಕಾರ್ಜುನ ತ್ರಿಮುಖೆ

ಈ ಪರಿಸರದಲ್ಲಿ ಮೊದಲಿಗೆ ಜಾನಪದ ಕವಿಯಾಗಿ ಗುರುತಿಸಿಕೊಂಡವರು ಮಲ್ಲಿಕಾರ್ಜುನ ತ್ರಿಮುಖೆಯವರು ಯಾವ ಶಿಕ್ಷಣ ಪಡೆಯದಿದ್ದರು ಕೂಡ 40ಕ್ಕೂ ಹೆಚ್ಚು ತತ್ವಪದಗಳ ರೂಪದಲ್ಲಿ ಪದ್ಯಗಳು ರಚಿಸಿದ್ದಾರೆ. ಹಾಗೆ ಹಲವಾರು ಭಜನೆಯ ಪದಗಳು, ಡಪ್ಪಿನ ಆಟಗಳು, ಲಾವಣಿ ಪದಗಳು, ಮೋಹರಂ ಪದಗಳು ರಚಿಸಿ ಜಾನಪದ ಕವಿಯಾಗಿ ಅಂದಿನ ಸಮಾಜದಲ್ಲಿ ಬೆಳಕು ಚೆಲ್ಲಿದ್ದಾರೆ. ಅವರ ಒಂದು ತತ್ವಪದ ಹೀಗಿದೆ. ತನವಿನೊಳು ಕದ್ದು ಕುಳಿತ್ತಿದ್ದಿ ಕಣ್ಣಿಗೆ ಕಾಣುವಲ್ಲಿ" ಈ ಸಾಲಿನಲ್ಲಿ ಪರಮಾತ್ಮನ ನಿಲುವಿನ ಬಗ್ಗೆ ಕವಿ ಹೇಳಿದ್ದಾರೆ. ಮುಂದುವರೆದು

***Please cite this article as:*** ಗೀತಾಂಜಲಿ. (2026). ಕಮಲಾಪೂರ ಪರಿಸರದ ಸಾಹಿತ್ಯ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 5(2), 1–5

***"ಬಾಡಿಗೆ ಮನೆಯೋಳು ಇದ್ದು ಬಿಟ್ಟು ಓಡಾಂವ ನಿನ್ನ ಭರವಸೆ ನನಗಿಲ್ಲೊ ಧೋಕಾ ಮಾಡಾಂವ್"***

ದೇಹವೆಂಬ ಬಾಡಿಗೆ ಮನೆಯಲ್ಲಿ ಜೀವ ಇದೆ ಅದು ಯಾವಾಗ ನಮಗೆ ಧೋಕಾ ಮಾಡಿ ಹೋಗುತ್ತೋ ಎಂದು ಆತ್ಮದ ಕುರಿತು ಹೇಳಿದ್ದಾರೆ.

**ಶ್ರೀ ವಿರೂಪಾಕ್ಷಯ್ಯ ಪುರಾಣಿಕರು**

ಕಮಲಾಪೂರ ಪರಿಸರದ ಸುಸಂಸ್ಕೃತ ಮನೆತನದಲ್ಲಿ ಜನಿಸಿದ ಪುರಾಣಿಕರು ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಸಂಸ್ಕೃತದಲ್ಲಿ ಅಪರಾವಾದ ಹಿಡಿತವನ್ನು ಹೊಂದಿದ್ದ ಪುರಾಣಿಕರು ಶ್ರೀ ಶರಣಬಸವೇಶ್ವರ ಪುರಾಣ, ಶ್ರೀ ಗುರುಬಸವ ಪುರಾಣ, ಮಡಿವಾಳ ಮಾಚಿದೇವರ ಪುರಾಣ, ಜನಪದ ಗೀತೆ, ಶ್ರೀ ಗುರುಕರುಣ ಗೀತಾಂಜಲಿ, ಶಿವಲೀಲಾಮೃತ ಕಾವ್ಯ ಹೀಗೆ ಹಲವಾರು ಪುರಾಣ ಕೃತಿಗಳು ರಚಿಸಿ ಸಾಹಿತ್ಯಕ್ಕೆ ತಮ್ಮದೇ ಕೊಡುಗೆ ನೀಡಿದ್ದಾರೆ. ಇವರನ್ನು ಗಮಕ ಕವಿಗಳೆಂದು ನಿವಾಸಿಗಳು ಹೊಗಳುತ್ತಿದ್ದರು.

**ಶ್ರೀ ಸುಭಾಶ್ಚಂದ್ರ ಕಶೆಟ್ಟಿಯವರು**

ಶ್ರೀ ಸುಭಾಸ್ಕಂದ ಕಶೆಟ್ಟಿಯವರು ಮೂಲತಃ ಬಾಚನಾಳ ಗ್ರಾಮದವರು. ಕಮಲಾಪೂರ ಪರಿಸರದ ಹಿರಿಯ ಸಾಹಿತಿಗಳು ಇವರು ವೃತ್ತಿಯಲ್ಲಿ ಗ್ರಾಮಲೆಕ್ಕಿಗರಾಗಿ ಸೇವೆ ಆರಂಭಿಸಿ 2005 ರಲ್ಲಿ ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ವ್ಯವಸ್ಥಾಪಕರಾಗಿ ಹಾಗೂ ಜಿಲ್ಲಾ ಪಂಚಾಯತ್ ಆಡಳಿತ ವಿಭಾಗ, ಕಲಬುರಗಿಯಲ್ಲಿ ಸೇವೆ ಸಲ್ಲಿಸಿ 2006ರಲ್ಲಿ ಸೇವೆಯಿಂದ ನಿವೃತ್ತಿ ಹೊಂದಿದ್ದಾರೆ. ವೃತ್ತಿ ಜೊತೆಗೆ ಪ್ರವೃತ್ತಿಯಲ್ಲಿ ಸಾಹಿತಿಯಾಗಿ ಕಥೆ, ಕವನ, ವಚನ, ಚಿಂತನೆ. ಪ್ರಬಂಧ, ವೈಚಾರಿಕ ಲೇಖನ, ಸಂಪಾದನೆ, ನಾಟಕ ಮತ್ತು ಜೀವನ ಚರಿತ್ರೆ ಹೀಗೆ ಕನ್ನಡದ ಹಲವು ಪ್ರಕಾರಗಳಲ್ಲಿ ಕೃಷಿಗೈದಿರುವರು. ಇಲ್ಲಿಯವರೆಗೆ 32ಕ್ಕೂ ಅಧಿಕ ಗ್ರಂಥಗಳು ಪ್ರಕಟಗೊಂಡಿವೆ ಕಶೆಟ್ಟಿಯವರ ನಡೆ, ನುಡಿ ಅವರ ಸರಳತನವೆ ಎಲ್ಲರ ಪ್ರೀತಿಗೆ ಕಾರಣ, ಮೌನವೀಯ ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ನಿವೃತ್ತರಾದರೂ ಸಾಹಿತ್ಯ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಸೌಹಾರ್ದ ಸಜ್ಜನಿಕೆಯ ಸಾಕಾರ ಮೂರ್ತಿ ಆಗಿರುವ ಸದಾ ಸಮಾಜಪರ ಚಿಂತನೆವುಳ್ಳ ಇವರು ಬದುಕಿನ ಪ್ರಜ್ಞೆ, ಕಾನನದ ಹೂಗಳು, ಸುಗಂಧ ಪುಷ್ಪಗಳು, ಜೇನುಹನಿ ಎಂಬ ಕವನ ಸಂಕಲನಗಳು ರಚಿಸಿದ್ದಾರೆ. ಈ ಕವನ ಸಂಕಲನಗಳಲ್ಲಿ ತಮ್ಮ ಜೀವನದುದ್ದಕ್ಕೂ ಆದ ಜೀವನಾನುಭವಗಳನ್ನು ತಮ್ಮ ಕವಿತೆಗಳಲ್ಲಿ ಹಿಡಿದಿಟ್ಟಿದ್ದಾರೆ ಹಾಗೂ ಯಾರ ತಪ್ಪು? ಯಾರಿಗೆ ಶಿಕ್ಷೆ?, ಜ್ಞಾನದ ಬಲ, ದಿಗಂಬರ ಮಾಣಿಕ ಮುತ್ತ್ಯಾ ಕಲ್ಲೂಡ, ಹಡೆದವರ ಹೃದಯ ಅಥವಾ ನೈತಿಕ ಬದುಕು ಎಂಬ ಸಾಮಾಜಿಕ ಮತ್ತು ಚಾರಿತ್ರಿಕ ನಾಟಕಗಳನ್ನು ರಚಿಸಿದ್ದಾರೆ.

ಜನಮೆಚ್ಚಿದ ನಾಯಕ, ಶ್ರೀ ಶಂಕರ ಶೆಟ್ಟಿ ಪಾಟೀಲರು ಕಮಲಾಪೂರ, ಕೆ.ಚನ್ನಬಸಪ್ಪ ಕುಳಗೇರಿ, ಸರಳ ಸಜ್ಜನ ವ್ಯಕ್ತಿ ಶ್ರೀ ವೀರಣ್ಣ ಪಡಶೆಟ್ಟಿ ಎಂಬ ಮಹಾನ ವ್ಯಕ್ತಿಗಳ ಜೀವನ ಸಾಧನೆ, ಜೀವನ ಸಾಧನೆ ಕುರಿತು ಜೀವನ ಚರಿತ್ರೆಗಳನ್ನು ಜೊತೆಗೆ ವೈಚಾರಿಕ ಪ್ರಬಂಧಗಳು, ಚಿಂತನ ಬರಹಗಳು, ಲೇಖನಗಳು, ವಚನಗಳ ವಿಶ್ಲೇಷಣೆ ಎಂಬ ಸಂಕೀರ್ಣ ಸಾಹಿತ್ಯವು ಕೂಡ ರಚಿಸಿ ಆ ಮೂಲಕ ಸಾಹಿತ್ಯ ಲೋಕಕ್ಕೆ ಅಪಾರವಾದ ಸೇವೆಯನ್ನು ಸಲ್ಲಿಸಿದ್ದಾರೆ. ಇವರ ಈ ಸೇವೆಯನ್ನು ಗುರುತಿಸಿ ಸಾಹಿತ್ಯ ಪ್ರಿಯರು ಸೇರಿ "ಸಾತ್ವಿಕ" ಎಂಬ ಅಭಿನಂದನ ಗ್ರಂಥವನ್ನು ಅರ್ಪಣೆ ಮಾಡಿದ್ದಾರೆ.

**ನಾಗಣ್ಣ ವಿ. ವಿಶ್ವಕರ್ಮ**

ಮೂಲತಃ ಕುರಿಕೋಟಾ ಗ್ರಾಮದ ಹಿರಿಯರು ಇವರು "ತಾಜಾ ಹೂಗಳ ತಂದಿರುವೆ", "ಅಜ್ಜ ಹೇಳಿದ ಮಾತು" ಎಂಬ ಪ್ರಮುಖ ಕೃತಿಯನ್ನು ರಚಿಸಿದ್ದಾರೆ. ಈ ಕೃತಿಗಳಲ್ಲದೆ ಎರಡನೂರಕ್ಕೂ ಅಧಿಕ ಪದ್ಯಗಳನ್ನು ರಚಿಸಿದ್ದಾರೆ. ಪ್ರಸ್ತುತ ಒಂದು ಕೃತಿ ರಚನಾ ಹಂತದಲ್ಲಿದೆ. ಇವರು ಸುಮಾರು 3 ದಶಕಗಳಿಂದಲೂ ತಮ್ಮನ್ನು ಆಧ್ಯಾತ್ಮಿಕದಲ್ಲಿ

ತೊಡಗಿಸಿಕೊಂಡಿದ್ದಾರೆ. ಅನೇಕ ಸಂಗೀತ, ಕೀರ್ತನ ಸಭೆಗಳು ನಡೆಸಿದ್ದಾರೆ ಸ್ವಂತ 10 ನಾಟಕ ಆಡಿ 11 ನಾಟಕಗಳನ್ನು ನಿರ್ದೇಶಿಸಿದ್ದಾರೆ. ಪ್ರಸ್ತುತವೂ ಕೂಡ ನೀತಿ ಪದ್ಯಗಳ ರಚನೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

**ಡಾ. ಕಲ್ಯಾಣರಾವ ಜಿ. ಪಾಟೀಲ**

ಕಲಬುರಗಿ ಜಿಲ್ಲೆಯ ಕಮಲಾಪೂರ ತಾಲೂಕಿನ ಸರಪೋಷ್ ಗ್ರಾಮದವರು ಉನ್ನತ ಶಿಕ್ಷಣ ಪಡೆದ ಶ್ರೀಯುತರು ಶ್ರೀ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದಲ್ಲಿ ತಮ್ಮ ಉಪನ್ಯಾಸಕ ವೃತ್ತಿಯನ್ನು ಪ್ರಾರಂಭಿಸಿ. ವಿವಿಧ ಕಡೆ ಸೇವೆಯನ್ನು ಸಲ್ಲಿಸಿ, 2012 ರಿಂದ ಕಲಬುರ್ಗಿಯ ಸರಕಾರಿ ಮಹಾವಿದ್ಯಾಲಯದ ಸ್ನಾತಕೋತ್ತರ ಕನ್ನಡ ಅಧ್ಯಯನ ಮತ್ತು ಸಂಶೋಧನ ವಿಭಾಗದಲ್ಲಿ ಸಹ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸಿ 31 ಆಗಸ್ಟ್ 2022 ರಂದು ಸೇವೆಯಿಂದ ವಯೋನಿವೃತ್ತಿ ಹೊಂದಿದ್ದಾರೆ.

ಇವರು ಇದುವರೆಗೆ ಅರವತ್ತೈದು (65) ಕೃತಿಗಳನ್ನು ಪ್ರಕಟಿಸಿದ್ದಾರೆ. ಇವುಗಳಲ್ಲಿ ಆಯ್ದ ಹಳಗನ್ನಡ ಪಠ್ಯಗಳು, ಪ್ರಾಚೀನ ಕಾವ್ಯ ಸಂಗ್ರಹ, ನಡುಗನ್ನಡ ಕಾವ್ಯ ಸಂಗ್ರಹ. ಶಬ್ದಮಣಿದರ್ಪಣ ಸಂಗ್ರಹ, ಸರಳ ಛಂದಸ್ಸು, ಜನಪರ ಜಂಗಮ, ಅಪ್ಪಟ ಕನ್ನಡತಿ ಈ ಗ್ರಂಥಗಳು ಗುಲಬರ್ಗಾ ವಿಶ್ವವಿದ್ಯಾಲಯ, ಸೊಲ್ಲಾಪುರ ವಿಶ್ವವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯಗಳ ಪದವಿ ವಿದ್ಯಾರ್ಥಿಗಳಿಗೆ ಪಠ್ಯ ಗ್ರಂಥ ಮತ್ತು ಸಾಂದರ್ಭಿಕ ಗ್ರಂಥಗಳಾಗಿವೆ. ಅಲ್ಲದೇ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಕನ್ನಡ ಕೈಪಿಡಿ, ಕಡ್ಡಾಯ ಕನ್ನಡ, ಕಾವ್ಯಸಂಚಯ, ಕನ್ನಡ ಕೈಗನ್ನಡಿ ಗ್ರಂಥಗಳು ರಚಿಸಿದ್ದಾರೆ. ಅಲ್ಲದೇ ಕನ್ನಡ ಸಾಹಿತ್ಯ: ಮನರಾವಲೋಕನ ಮಾಲೆ ಶ್ರೀ ಸಿದ್ದಲಿಂಗೇಶ್ವರ ಪ್ರಕಾಶನದಿಂದ ಜನವರಿ 2022 ರಲ್ಲಿ ಪ್ರಕಟವಾಗಿದೆ.

ಡಾ. ಎಂ.ಎಂ. ಕಲಬುರ್ಗಿಯವರ ಶೋಧಗಳು (ಮಾರ್ಗ ಸಂಪುಟಗಳ ಪರಾಮರ್ಶೆ) ಎಂಬ ಇವರ ಕೃತಿಯು ಡಾ.ಎಂ.ಎಂ. ಕಲಬುರ್ಗಿ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗನಿಂದ ಪಕಟವಾಗಿದೆ. ಇವರು ಸಂಪಾದಿಸಿದ ಕಲ್ಯಾಣ ದರ್ಪಣ, ರಚನಾ, ದಾಸೋಹ, ಗುರುಕುಲ ದರ್ಶನ, ಶರಣ ಕಲ್ಯಾಣ, ಶಿವರುದ್ರ, ಕಲ್ಯಾಣ ಮಾರ್ಗ, ಕವಿಜನಮಾರ್ಗ, ನೆನಪೇ ನಂದಾದೀಪ, ಜಗನೀಲ, ಅವಿಶ್ರಾಂತ, ಮಹಾದಾಸೋಹ ಜ್ಞಾನರತ್ನ, ಕಲ್ಯಾಣ ದರ್ಶನ ಮುಂತಾದ ಇವರ ಸಂಪಾದನೆಯ ಗ್ರಂಥಗಳು ಕಲ್ಯಾಣ ಕರ್ನಾಟಕ ಪ್ರದೇಶದ ಬಗೆಗೆ ಸಾಂದರ್ಭಿಕ ಗ್ರಂಥಗಳಾಗಿವೆ.

ಆಕಾಶವಾಣಿ ಮತ್ತು ದೂರದರ್ಶನಗಳಲ್ಲಿ ಇವರ ಎಪ್ಪತ್ತು (70) ಲೇಖನಗಳು ಪ್ರಸಾರವಾಗಿವೆ. ಇವರ ಸಾಹಿತ್ಯ ಸೇವೆಯನ್ನು ಗುರುತಿಸಿ ವಿವಿಧ ಪ್ರಶಸ್ತಿ ಪುರಸ್ಕಾರಗಳು ದೊರೆತಿವೆ. ಇವರು 2018ರಲ್ಲಿ ಕಲಬುರಗಿ ತಾಲೂಕು 5ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವಕ್ಕೂ ಪಾತ್ರರಾಗಿದ್ದಾರೆ. ಇವರ ಶರಣ ಸಂತುಷ್ಟಿ ಎನ್ನುವ ಗ್ರಂಥಕ್ಕೆ ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ 2018ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ. ಇವರ ಜೀವಮಾನದ ಸಾಹಿತ್ಯಕ ಸಾಧನೆಯನ್ನು ಪರಿಗಣಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಶ್ರೀಯುತರಿಗೆ 2020ರಲ್ಲಿ ಸಾಹಿತ್ಯಶ್ರೀ ಪ್ರಶಸ್ತಿ ನೀಡಿ ಪುರಸ್ಕರಿಸಿದೆ. ಬಸವಕಲ್ಯಾಣ ಅನುಭವ ಮಂಟಪ ಪ್ರತಿಷ್ಠಾನದಿಂದ 2022ರಲ್ಲಿ ನಾಡೋಜ ಎಂ.ಎಂ. ಕಲಬುರ್ಗಿ ರಾಷ್ಟ್ರೀಯ ಸಾಹಿತ್ಯ ಮತ್ತು ಸಂಶೋಧನ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. 2023ರಲ್ಲಿ ಕಲಬುರಗಿ ಜಿಲ್ಲಾ 19ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆಯ ಗೌರವಕ್ಕೆ ಪಾತ್ರರಾಗಿದ್ದಾರೆ.

ಇವರು ಹಳಗನ್ನಡ ಕಾವ್ಯ, ಹಳಗನ್ನಡ ವ್ಯಾಕರಣ, ಛಂದಸ್ಸು, ಹಸ್ತಪ್ರತಿ, ಗ್ರಂಥಸಂಪಾದನೆ, ಅನುಭಾವ ಸಾಹಿತ್ಯ ಮತ್ತು ವೈಚಾರಿಕ ವಿಷಯಗಳಲ್ಲಿ ಹೆಚ್ಚಿನ

ಆಸಕ್ತಿ ವಹಿಸಿರುತ್ತಾರೆ. ಅಧ್ಯಯನ, ಅಧ್ಯಾಪನ ಮತ್ತು ಸಂಶೋಧನೆಗಳಲ್ಲಿ ತಮ್ಮನ್ನು ತಾವು ಸಮರ್ಪಿಸಿಕೊಂಡಿದ್ದಾರೆ. ವೃತ್ತಿ-ಪ್ರವೃತ್ತಿಯಲ್ಲಿ ಸರಳತೆ, ಸೌಜನ್ಯತೆ, ಸೌಹಾರ್ದತೆ ಮತ್ತು ಆತ್ಮೀಯತೆಗಳಿಗೆ ಹೆಸರಾಗಿದ್ದಾರೆ.

**ಡಾ. ಸುರೇಂದ್ರಕುಮಾರ ಕೆರಮಗಿ**

ಡಾ. ಸುರೇಂದ್ರಕುಮಾರ ಕೆರಮಗಿ ಅವರು ಕಾವ್ಯ, ಕಥೆ, ಕಾದಂಬರಿ, ಜಾನಪದ, ನಾಟಕ, ಆತ್ಮಚರಿತ್ರೆ, ಆರೋಗ್ಯ, ಆಧ್ಯಾತ್ಮ ಸೇರಿದಂತೆ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಮೂಲತಃ ಕಮಲಾಪೂರ ಗ್ರಾಮದವರು ಉನ್ನತ ಶಿಕ್ಷಣ ಪಡೆದು 1996ರಲ್ಲಿ ಕಲಬುರಗಿಯ ಸರ್ಕಾರಿ ಮಹಾವಿದ್ಯಾಲಯದ ಸ್ನಾತಕೋತ್ತರ ಕನ್ನಡ ವಿಭಾಗದ ಪ್ರಾಧ್ಯಾಪಕ ಸೇವೆ ಸಲ್ಲಿಸುತ್ತಿದ್ದಾರೆ.

"ಸಾಹಿತ್ಯ ಸುಧೆ" ಹಳಗನ್ನಡ ಮತ್ತು ನಡುಗನ್ನಡದ ಸಾಹಿತ್ಯದ ವಿಷಯವನ್ನು ಕುರಿತು ರಚಿಸಿದ್ದಾರೆ. ಹಾಗೆ "ಸಾಹಿತ್ಯ ಸೌರಭ" ಕೃತಿಯನ್ನು ರಚಿಸುವ ಮೂಲಕ ಮಾನವೀಯ ಮೌಲ್ಯಗಳು ತಿಳಿಸುವ ರಾಮಾಯಣ ಹಾಗೂ ಮಹಾಭಾರತ ಕೃತಿಗಳು ಇಂದಿಗೂ ನಮಗೆ ಏಕೆ? ಪ್ರಸ್ತುತವಾಗುತ್ತದೆಯೆಂದು ತಿಳಿಯಪಡಿಸುವ ಪ್ರಯತ್ನ ಈ ಕೃತಿಯಲ್ಲಿ ಮಾಡಿದ್ದಾರೆ. "ದೇವರ ದಾಸಿಮಯ್ಯ" ಈ ಕೃತಿಯಲ್ಲಿ ಇಡೀ ದಾಸಿಮಯ್ಯನವರ ಬಾಲ್ಯ, ತಂದೆ, ತಾಯಿ ಶ್ರೀಶೈಲಕ್ಕೆ ಹೋಗುವ ಪರಿ, ಶ್ರೀಶೈಲದಿಂದ ನಿರ್ಗಮನ ಕುರಿತು ಹೇಳುತ್ತದೆ. ಡಾ. ಸುರೇಂದ್ರ ಕುಮಾರ ಕೆರಮಗಿ ಅವರ ಸಾಹಿತ್ಯವು ಕುಸುಮದ ಪರಿಮಳದಂತೆ ಎಲ್ಲ ಕಡೆ ಪಸರಿಸಿ ಬುದ್ಧಿವಂತಿಕೆಯ ಪರಿಸವನ್ನು ಉಣಬಡಿಸುತ್ತದೆ.

**ಡಾ. ಶರಣಬಸಪ್ಪ ವಡ್ಡನಕೇರಿ**

ಮೂಲತಃ ಡೊಂಗರಗಾಂವ ಗ್ರಾಮದವರಾದ ಡಾ.ಶರಣಬಸಪ್ಪ ವಡ್ಡನಕೇರಿಯವರು ವೃತ್ತಿಯಿಂದ ಅಧ್ಯಾಪಕರಾಗಿ ಖಾಜಾ ಬಂದೇನವಾಜ್ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದು, ಪ್ರವೃತ್ತಿಯಿಂದ ಸಾಹಿತಿಗಳಾಗಿ, ಸಮಾಜ ಸೇವಕರಾಗಿ, ಮಾತೋಶ್ರೀ ಈರಮ್ಮ ವಡ್ಡನಕೇರಿ (ಅವರ ತಾಯಿಯವರ ಸ್ಮರಣೆಗಾಗಿ) ಪ್ರತಿಷ್ಠಾನದ ಅಧ್ಯಕ್ಷರಾಗಿ, ಕಲಬುರಗಿ ಜಿಲ್ಲೆಯ ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಕನ್ನಡ ನಾಡು ಲೇಖಕರ, ಓದುಗರ ಸಹಕಾರ ಸಂಘದ ನಿರ್ದೇಶಕರಾಗಿ, ಸಿದ್ದಲಿಂಗೇಶ್ವರ ಪ್ರಕಾಶನದ ಸಲಹಾ ಸಮಿತಿ ಸದಸ್ಯರಾಗಿ ಅನೇಕ ರೀತಿಯ ಸಮಾಜಮುಖಿ ಹಾಗೂ ಸಾಹಿತ್ಯಪರ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಪತ್ರ ಹಾಗೂ ಪತ್ರೇತರ ಸೇರಿದಂತೆ 85 ಪುಸ್ತಕಗಳನ್ನು ರಚಿಸಿದ್ದು, ಅಷ್ಟೇ ಅಲ್ಲದೇ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರನ್ನು ಗುರುತಿಸಿ ಅವ್ವ ಪ್ರಶಸ್ತಿ ನೀಡಿ ಗೌರವಿಸುತ್ತ ಬಂದಿದ್ದು, ತಮ್ಮ ಪ್ರಕಾಶನದಿಂದ 150 ಕ್ಕೂ ಹೆಚ್ಚು ಪುಸ್ತಕ ಪ್ರಕಟಿಸಿದ್ದಾರೆ.

ಹೀಗೆ ಸಮಾಜಸೇವಕರಾಗಿ ಸಾಹಿತಿಗಳಾಗಿ, ಪ್ರಕಾಶಕರಾಗಿ ಈ ಭಾಗದಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಕ್ರಿಯಾಶೀಲ ವ್ಯಕ್ತಿತ್ವ, ಪ್ರಮಾಣಿಕತನ, ನಿಸ್ವಾರ್ಥ ಸೇವೆಯನ್ನು ಗುರುತಿಸಿ ಅನೇಕ ಸಂಘ-ಸಂಸ್ಥೆಗಳು ಇವರಿಗೆ ಪ್ರಶಸ್ತಿ ನೀಡಿ ಗೌರವಿಸಿವೆ. ಅಲ್ಲದೆ ಅತ್ಯಂತ ಕಿರಿಯ ವಯಸ್ಸಿನಲ್ಲಿಯೇ ಲಂಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್, ಇಂಡಿಯನ್ ಬುಕ್ ಆಫ್ ರೆಕಾರ್ಡ್ ಹಾಗೂ ಪ್ರೆಸ್ಟಿಜೆಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ನಲ್ಲಿ ಇವರ ಹೆಸರು ಸೇರ್ಪಡೆಗೊಂಡಿದೆ. ಸೃಜನಶೀಲ ಬರಹಗಾರರಾದ ಇವರು ಹಲವಾರು ಸಮ್ಮೇಳನ ಮತ್ತು ಸಮಾರಂಭಗಳಲ್ಲಿ ಪ್ರಬಂಧಗಳನ್ನು ಮಂಡಿಸಿದ್ದಾರೆ. ಸ್ವರಚಿತ ಕವನಗಳನ್ನು ವಾಚನ ಮಾಡಿದ್ದಾರೆ.

**ಶ್ರೀಮತಿ ಮಲ್ಲಮ್ಮ ಎಸ್. ಕಾಳಗಿ**

ಮೂಲತಃ ಮಹಾಗಾಂವದವರಾದ ಇವರು ಪ್ರೌಢಶಾಲಾ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ತಮ್ಮನ್ನು ತಾವು ಸಾಹಿತ್ಯ ರಚನೆಯಲ್ಲಿ ಗುರುತಿಸಿಕೊಂಡಿದ್ದಾರೆ. ಇವರು "ಪಾತಾಳಗಂಗೆ" ಎಂಬ ಕವನ ಸಂಕಲನ ರಚಿಸಿದ್ದಾರೆ. ಅಖಿಲ ಭಾರತ ಕವಿಯತ್ರಿಯರ ಬಳಗ, ಕಾವ್ಯಾಂಜಲಿ, ಕಲಬುರಗಿ

ಬರಹಗಾರರ ಬಳಗ, ವೈಸ್ ವುಮೆನ್ಸ್ ಕ್ಲಬ್ ಸದಸ್ಯೆಯಾಗಿ ಆಕಾಶ ವಾಣಿಯಲ್ಲಿ ವಿವಿಧ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಜಿಲ್ಲೆ, ತಾಲೂಕು, ರಾಜ್ಯ ಮತ್ತು ಅಖಿಲ ಭಾರತ ಕವಿಗೋಷ್ಠಿಗಳಲ್ಲಿ ಭಾಗವಹಿಸಿರುವರು. ಸರಳ ಜೀವನ, ಉನ್ನತ ವಿಚಾರವುಳ್ಳ ಮಲ್ಲಮ್ಮ ಎಸ್. ಕಾಳಗಿಯವರು ಶಿಕ್ಷಣ ಸೇರಿದಂತೆ ಸಮಾಜದ ಬಹುಮುಖ ಆಯಾಮಗಳಲ್ಲಿ ಮೌಲಿಕ ಕಾರ್ಯಗೈದು ಹೆಸರು ಮಾಡಿದರು. ತಮ್ಮ ಇಡೀ ಬದಕನ್ನು ಶೈಕ್ಷಣಿಕ ರಂಗಕ್ಕೆ, ಸಾಹಿತಿಕ ಮತ್ತು ಸಾಂಸ್ಕೃತಿಕ ರಂಗಕ್ಕೆ ಮೀಸಲಿಟ್ಟ ಅತ್ಯಂತ ಶ್ರದ್ಧೆಯಿಂದ ಬದುಕಿದ ಇವರು ನಾಡು ನುಡಿಗೆ ಅದರಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಇವರ ಕೊಡುಗೆ ಅಪಾರ. ಹೀಗೆ ಕಮಲಾಪೂರ ಪರಿಸರವು ಅತ್ಯಮೂಲ್ಯ ಸಾಹಿತಿಗಳ ಜನ್ಮಭೂಮಿಯಾಗಿದೆ. ಈ ಪರಿಸರದ ಕವಿಗಳ ಕೊಡುಗೆ ಕನ್ನಡ ಸಾಹಿತ್ಯಲೋಕಕ್ಕೆ ಅಪಾರವಾಗಿದೆ.

**ಪರಾಮರ್ಶನ ಗ್ರಂಥಗಳು**


- ಕಲ್ಯಾಣರಾವ ಜಿ. ಪಾಟೀಲ. (ಸಂ.) (2014) *ಕಲ್ಯಾಣ ಮಾರ್ಗ.*
- ರಘುಶಂಖ ಭಾತಂಬ್ರಾ. (ಸಂ.) (2021). *ಮಹಾ ಗುರು ಬದುಕು–ಬರಹ.*
- ಶುಭಾಶ್ಚಂದ್ರ ಕಶೆಟ್ಟಿ. (2022). *ಕಮಲಾಪೂರ ತಾಲೂಕಿನ ಕೀರ್ತಿ ಕಹಳೆ.*
- ಸುಭಾಶ್ಚಂದ್ರ ಕಶೆಟ್ಟಿ. (2010). *ಕಮಲಾಪೂರದ ಜಾನಪದ ಕವಿ ಮಲ್ಲಿಕಾರ್ಜುನ ತ್ರಿಮುಖೆ.*
- ವಿಜಯಕುಮಾರ ಜಿ. ಪರುತೆ. (2022). *ಸಾತ್ವಿಕ ಶ್ರೀ ಸುಭಾಷಚಂದ್ರ ಕಶೆಟ್ಟಿ ಬಾಚನಾಳ ಅವರ ಅಭಿನಂದನ ಸಂಪುಟ.*